# ಅಪೂರ್ವ ಹೆಣ್ಣು

ಚೆಲುವೆಯರು ಹುಡುಕುತ್ತಾರೆ ನನ್ನ ಗುಟ್ಟುಗಳೆಲ್ಲಿ ಅಡಗಿವೆಯೆಂದು.
ನಾನೇನೂ ಮನಮೋಹಕ ಸುಂದರಿಯಲ್ಲ,
ಅಥವಾ ರೂಪದರ್ಶಿಯ ಮೈ ಮಾಟವನ್ನೂ ಹೊಂದಿಲ್ಲ.
ಸ್ವತಃ ನಾನೇ ರಟ್ಟು ಮಾಡ ಹೊರಟಾಗ,
ನನ್ನ ಮಾತನ್ನು ಸುಳ್ಳೆಂದು ಕಡೆಗಣಿಸುತ್ತಾರೆ.
ಹೇಳುತ್ತೇನೆ ಕೇಳಿ,
ಆ ಗೋಪ್ಯವಿರುವುದು ನನ್ನ ತೋಳುಗಳ ಹರವಿನಲ್ಲಿ,
ನನ್ನ ನಿತಂಬಗಳ ವ್ಯಾಪ್ತಿಯಲ್ಲಿ,
ನನ್ನ ನಡೆಯ ಲಾಸ್ಯದಲ್ಲಿ,
ನನ್ನ ತುಟಿಗಳ ಸುರುಳಿಯಲ್ಲಿ.
ನಾನೋರ್ವ ಅದ್ಭುತ ಹೆಣ್ಣು.
ಅಪೂರ್ವ ಹೆಣ್ಣು,
ಅದು ನಾನು.



ನೀವು ಬಯಸುವಷ್ಟೇ ತಣ್ಣಗೆ ನಾನು
ಕೋಣೆಯೊಂದನ್ನು ಪ್ರವೇಶಿಸಬಲ್ಲೆ.
ಮತ್ತು ಪುರುಷ ಜಾತಿಯ ವಿಚಾರದಲ್ಲಿ
ಹೇಳಬೇಕೆಂದರೆ,
ನನ್ನ ಕಂಡ ಕೂಡಲೇ ಗಂಡುಗಳು ಎದ್ದು
ನಿಲ್ಲುವರು ಅಥವಾ
ತಮ್ಮ ಮೊಣಕಾಲಿನ ಮೇಲೆ ಬಾಗಿ
ಕೂರುತ್ತಾರೆ.
ಅನಂತರ ಗೂಡಿಗೆ ಜೇನುಗಳು ಮುತ್ತುವ
ಪರಿಯಲ್ಲಿ
ಮುತ್ತಿಕೊಳ್ತಾರೆ,
ನಾನ್ನುತ್ತೇನೆ,
ಆ ಗುಟ್ಟಿರುವುದು ನನ್ನ ಕಣ್ಣಿನ
ಬೆಂಕಿಯಲ್ಲಿ,
ಮತ್ತು ನನ್ನ ದಂತಪಕ್ತಿಯ ಹೊಳಪಿನಲ್ಲಿ,
ನನ್ನ ನಡುವಿನ ತೊನೆದಾಟ,
ಮತ್ತು ನನ್ನ ಪಾದಗಳ ಉಲ್ಲಾಸದಲ್ಲಿ.
ನಾನೋರ್ವ ಅದ್ಭುತ ಹೆಣ್ಣು